## ಧಾರಾವಾಹಿ ಲೇಖನ

# ಶ್ರೀರಾಮಕೃಷ್ಣರ ಅಪ್ರಸಿದ್ಧ ಭಕ್ತರು

ಸ್ವರ್ಣಗೌರಿ

(ಹಿಂದಿನ ಸಂಚಿಕೆಯಿಂದ)

### ಪಂಡಿತ ಪದ್ಮಲೋಚನ

"ಏನು, ಅವತಾರವೇ? ಅವರು ಇಚ್ಛೆಪಟ್ಟರೆ ಅವತಾರಗಳನ್ನೇ ಸೃಷ್ಟಿಸಬಲ್ಲರು!" ಎಂದು ಶ್ರೀರಾಮಕೃಷ್ಣರ ಮಹಿಮೆಯನ್ನು ಕೊಂಡಾಡಿದವನು ಪಂಡಿತ ಪದ್ಮಲೋಚನ. "ಶ್ರೇಷ್ಠ ಪಂಡಿತರೆಲ್ಲರೂ ಇವರನ್ನು (ಶ್ರೀರಾಮಕೃಷ್ಣರೆಡೆಗೆ ಕೈತೋರಿಸಿ) ಅವತಾರವೆಂದು ಕರೆಯುತ್ತಾರೆ. ನಿಮ್ಮ ಅಭಿಪ್ರಾಯವೇನು?" ಎಂಬ ಹೃದಯನ ಪ್ರಶ್ನೆಗೆ ಪದ್ಮಲೋಚನ ಹೀಗೆ ಉತ್ತರಿಸಿದನು.

ಪದ್ಮಲೋಚನನು ಬರ್ಡವಾನ್ ರಾಜನ ಆಸ್ಥಾನ ಪಂಡಿತನಾಗಿದ್ದನು. ಬರ್ಡವಾನ್ ಬಳಿಯ ಕಲನ್ ಎಂಬ ಸ್ಥಳದಲ್ಲಿ ಜನಿಸಿದ ನಿಷ್ಠಾವಂತ ಬ್ರಾಹ್ಮಣನಾದ ಪದ್ಮಲೋಚನ ತರ್ಕಾಲಂಕಾರ ಭಟ್ಟಾಚಾರ್ಯನು ಕಾಶಿಗೆ ಹೋಗಿ ಬಹಳ ಶ್ರಮಪಟ್ಟು ವೇದಾಂತ ಜ್ಞಾನವನ್ನು ಸಂಪಾದಿಸಿದ್ದನು; ಜೊತೆಗೆ ನ್ಯಾಯಶಾಸ್ತ್ರದಲ್ಲೂ ಪರಿಣತಿ ಪಡೆದಿದ್ದನು. ಆತನ ಹಿರಿಮೆಯ ಬಗ್ಗೆ ಅನೇಕ ಕಥೆಗಳು ಪ್ರಚಲಿತವಾಗಿದ್ದವು. ಆತನ ವೈರಾಗ್ಯ, ತ್ಯಾಗ, ಭಕ್ತಿ, ವಿಶಾಲ ಹೃದಯ, ಸಚ್ಚಾರಿತ್ರ್ಯ, ತಪಸ್ಸು – ಇವುಗಳನ್ನು ನೋಡಿ ಜನರು ಆತನೊಬ್ಬ ದೊಡ್ಡ ಭಕ್ತ, ಸಾಧಕ ಎಂದು ಗೌರವಿಸುತ್ತಿದ್ದರು.

ಈ ಕಾರಣದಿಂದಲೇ, ಜ್ಞಾನ ಮತ್ತು ಭಕ್ತಿಗಳ ಅಪೂರ್ವ ಸಂಗಮವಾಗಿದ್ದ ಈ ಪಂಡಿತನ ದರ್ಶನಕ್ಕಾಗಿ, ಶ್ರೀರಾಮಕೃಷ್ಣರು ತಾವೇ ಸ್ವತಃ ಆತನನ್ನು ಹುಡುಕಿಕೊಂಡು ಹೋದರು. "ಯಾರನ್ನು ಅನೇಕ ಜನರು ಗೌರವಿಸುತ್ತಾರೋ, ಅಲ್ಲಿ ಭಗವಂತನ ವಿಶೇಷ ಆವಿರ್ಭಾವವಿದೆ. ಆದ್ದರಿಂದ ಅವರಿಗೆ ತಕ್ಕ ಮಾನ್ಯತೆ ನೀಡಬೇಕು" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದರಂತೆಯೇ, ಯಾರಲ್ಲಾದರೂ ಉದಾತ್ತ ಗುಣಗಳಿದ್ದರೆ ಅವರನ್ನು ಭೇಟಿ ಮಾಡಲು ಹಾತೊರೆಯುತ್ತಿದ್ದರು. ಅವರೇ ಬಂದರೆ ಸರಿ; ಇಲ್ಲದಿದ್ದರೆ ತಾವೇ ಅವರನ್ನು ಹುಡುಕಿಕೊಂಡು ಹೋಗುತ್ತಿದ್ದರು.

ಪಂಡಿತನು ಅನೇಕ ವರ್ಷಗಳಿಂದ ಬರ್ಡವಾನ್ ರಾಜನ ಆಸ್ಥಾನವನ್ನಲಂಕರಿಸಿದ್ದನು; ಈಗಾಗಲೇ ವೃದ್ಧನಾಗಿದ್ದನು. ಒಮ್ಮೆ ಅನಾರೋಗ್ಯದ ನಿಮಿತ್ತ ಕೊಲ್ಕತಾಗೆ ವೈದ್ಯಕೀಯ ಶುಶ್ರೂಷೆಗಾಗಿ ಬಂದಿದ್ದನು. ವಿಷಯ ತಿಳಿದ ಶ್ರೀರಾಮಕೃಷ್ಣರು ಆತನಿಗೆ ಮುಂಚಿತವಾಗಿ ಸಮಾಚಾರ ನೀಡದೆ, ಭೇಟಿ ನೀಡಿದರು. ಈ ಅನಿರೀಕ್ಷಿತ ದರ್ಶನದಿಂದ ಪುಳಕಿತನಾದ ಪಂಡಿತನು, "ಎಂತಹ ಸುಂದರ ದೃಶ್ಯ! ಒಳಗಡೆ ತಾಯಿ ಕಾಳಿ, ಹೊರಗಡೆ ಬರಿಯ ಮಾನವ ಹೊದಿಕೆ!" ಎಂದು ಆಶ್ಚರ್ಯಚಕಿತನಾಗಿ ಉದ್ಗರಿಸಿದನು.

ಶ್ರೀರಾಮಕೃಷ್ಣರು ವ್ಯಕ್ತಿಯೊಬ್ಬನ ಅಂತರಂಗದೊಳಗೆ ಹೊಕ್ಕು ಆತನ ಆಧ್ಯಾತ್ಮಿಕ ಸ್ಥಿತಿಗತಿಗಳನ್ನೆಲ್ಲ ಅರಿಯಬಲ್ಲವರಾಗಿದ್ದರು. ಆದ್ದರಿಂದಲೇ, ಪಂಡಿತನು ತಾಯಿ ಅಂಬಿಕೆಯ ಕೃಪೆಯಿಂದ ಯೋಗಶಕ್ತಿಯನ್ನು ಪಡೆದಿದ್ದಾನೆಂಬುದನ್ನು ಮೊದಲ ನೋಟದಲ್ಲೇ ಗುರುತಿಸಿದರು. ನಂತರ ಒಂದೆರಡು ಭಕ್ತಿಗೀತೆಗಳನ್ನು ಹಾಡುತ್ತಾ ಸಮಾಧಿಸ್ಥರಾದ ಶ್ರೀರಾಮಕೃಷ್ಣರನ್ನು ನೋಡಿ ಪಂಡಿತನು ಸ್ತಂಭೀಭೂತನಾದನು. ಭಕ್ತಿಯಿಂದ ಕೈಮುಗಿದು ನಿಂತ ಅವನ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಸುರಿಯತೊಡಗಿತು. ತಾನು ಇಷ್ಟರವರೆಗೆ ಶಾಸ್ತ್ರದಲ್ಲಿ ಓದಿದ್ದನ್ನು ಇಂದು ಕಣ್ಣಾರೆ ಕಂಡಂತಾಯಿತು, ಅಷ್ಟೇ ಅಲ್ಲ, ಶ್ರೀರಾಮಕೃಷ್ಣರ ಅನುಭವಗಳು ಶಾಸ್ತ್ರಗಳನ್ನೂ ಮೀರಿವೆ ಎಂಬ ಗಹನ ವಿಚಾರವು ಅವನ ಸೂಕ್ಷ್ಮಬುದ್ಧಿಗೆ ಗೋಚರಿಸದಿರಲಿಲ್ಲ. ಶಾಸ್ತ್ರಗಳ ಅಧ್ಯಯನದಿಂದ ಪಂಡಿತನ ವಿಚಾರಶಕ್ತಿ, ವಿವೇಕ–ಇವೆಲ್ಲವೂ ಎಷ್ಟು ಹರಿತವಾಗಿತ್ತೆಂದರೆ, "ನೀನೊಬ್ಬ ಆಸ್ಥಾನ ಪಂಡಿತ. ಆದರೆ ನನ್ನನ್ನೇಕೆ ಇಷ್ಟೊಂದು ಗೌರವಿಸುತ್ತೀಯೆ?" ಎಂಬ ಶ್ರೀರಾಮಕೃಷ್ಣರ ಪ್ರಶ್ನೆಗೆ ಹಿಂದುಮುಂದು ನೋಡದೆ ತಟಕ್ಕನೆ ಉತ್ತರಿಸಿದನು: "ನಿಮ್ಮ ಪಾದಧೂಳಿನಿಂದ ನೂರಾರು ಮೂರ್ಖರನ್ನು ನನ್ನಂತಹ ಪಂಡಿತರನ್ನಾಗಿ ಪರಿವರ್ತಿಸಬಲ್ಲ ಶಕ್ತಿವಂತರು ನೀವು." ಅಷ್ಟೇ ಅಲ್ಲದೆ, "ನಾನು ಬ್ರಾಹ್ಮಣ ವಂಶದಲ್ಲಿ ಜನಿಸಿದ್ದರೂ, ನಿಮ್ಮೊಡನೆ ಶೂದ್ರರ ಮನೆಯಲ್ಲೂ ಊಟಮಾಡಬಲ್ಲೆ' ಎಂದು ಘೋಷಿಸಿದನು. ಎಂತಹ ಅಪರಿಮಿತ ಶ್ರದ್ಧೆಭಕ್ತಿಗಳು! ಇದಕ್ಕೆ ಕಾರಣ ಏನು ಗೊತ್ತೆ? ಪ್ರಥಮ ಭೇಟಿಯಲ್ಲೇ ಪಂಡಿತನಿಗೆ, ಶ್ರೀರಾಮಕೃಷ್ಣರಲ್ಲಿ, ತನ್ನ ಇಷ್ಟದೇವತೆ ಕಾಳಿಯ ದರ್ಶನವಾಗಿತ್ತು!

ಯೋಗಶಕ್ತಿಗಳನ್ನು ಪಡೆಯುವ ಆಸೆಯಿಂದ ಪಂಡಿತನು ಹಲವು ವರ್ಷಗಳ ಕಾಲ ತಾಂತ್ರಿಕ ಸಾಧನೆಯನ್ನು ಮಾಡಿದ್ದನು. ಫಲವಾಗಿ ಅಂಬಿಕಾದೇವಿಯ ಕೃಪೆಯಿಂದ ಧಾರ್ಮಿಕ ವಾಗ್ವಿವಾದಗಳಲ್ಲಿ ಸದಾ ಜಯ ಹೊಂದುವ ಒಂದು ಅಲೌಕಿಕ ಶಕ್ತಿಯನ್ನು ಪಡೆದಿದ್ದನು. ತನ್ನ ಇಷ್ಟದೇವತೆಯ ಆಣತಿಯಂತೆ ಎಲ್ಲಿಗೆ ಹೋದರೂ, ಒಂದು ಕೈಚೌಕ ಮತ್ತು ಕಮಂಡಲುವನ್ನು ಒಯ್ಯುತ್ತಿದ್ದನು. ಯಾವುದೇ ಧಾರ್ಮಿಕ ಚರ್ಚೆ ಪ್ರಾರಂಭವಾಗುವ ಮುನ್ನ, ಅತ್ತಿಂದಿತ್ತ ಇತ್ತಿಂದತ್ತ ನಾಲ್ಕು ಹೆಜ್ಜೆಗಳನ್ನು ಹಾಕಿ, ಬಾಯಿ ಮುಕ್ಕಳಿಸಿ, ತಲೆಯ ಮೇಲೆ ನಾಲ್ಕು ಹನಿ ನೀರನ್ನು ಸಿಂಪಡಿಸಿಕೊಳ್ಳುತ್ತಿದ್ದನು. ಇದರಿಂದ ಅವನಿಗೆ ಅಲೌಕಿಕ ಶಕ್ತಿ ಪ್ರಾಪ್ತವಾಗಿ, ಅವನು ಆ ವಿವಾದದಲ್ಲಿ ಜಯಶಾಲಿಯಾಗುತ್ತಿದ್ದನು. ಒಂದು ದಿನ ಶ್ರೀರಾಮಕೃಷ್ಣರು ಪಂಡಿತನಿಗೆ ಗೊತ್ತಾಗ

ದಂತೆ, ಅವನ ಕೈಚೌಕ ಹಾಗೂ ಕಮಂಡಲುಗಳನ್ನು ಬಚ್ಚಿಟ್ಟು ಬಿಟ್ಟರು. ಅದರೊಡನೆ ಪಂಡಿತನಲ್ಲಿದ್ದ ಯೋಗಶಕ್ತಿಯ ಮೇಲಿನ ಆಸೆಯನ್ನು ಕೂಡ ಬೇರುಸಹಿತ ಕಿತ್ತೊಗೆದರು. ಸೂಕ್ಷ್ಮಬುದ್ಧಿಯ ಪಂಡಿತನಿಗೆ ಕೂಡಲೇ ಎಲ್ಲವೂ ಅರಿವಾಯಿತು. ಇದರಿಂದ, ಶ್ರೀರಾಮಕೃಷ್ಣರ ಮೇಲಿನ ಭಕ್ತಿ ಇಮ್ಮಡಿಯಾಯಿತು. ಏಕೆಂದರೆ ಈ ರಹಸ್ಯ ಯಾರೂ ಹೇಳದೆಯೇ, ಶ್ರೀರಾಮಕೃಷ್ಣರ ದಿವ್ಯದೃಷ್ಟಿಗೆ ಗೋಚರವಾಗಿತ್ತು. ಹೀಗೆ ಶ್ರೀರಾಮಕೃಷ್ಣರು ಪಂಡಿತ ಪದ್ಮ ಲೋಚನನ ಆಧ್ಯಾತ್ಮಿಕ ಹಾದಿಯಲ್ಲಿನ ವಿಘ್ನವನ್ನು ತೆಗೆದು ಹಾಕಿ, ಅವನು ಸಾಧನಾಪಥದಲ್ಲಿ ಮುಂದುವರಿಯಲು ಸಹಾಯ ಮಾಡಿದರು.

ದಿನಗಳೆದಂತೆ ಪಂಡಿತನ ಆರೋಗ್ಯ ಕ್ಷೀಣಿಸುತ್ತಾ ಬಂದಿತು. ಒಂದು ದಿನ ಅವನು ಕಣ್ಣೀರು ಸುರಿಸುತ್ತಾ ರಾಮಕೃಷ್ಣರಿಗೆ ವಿದಾಯ ಹೇಳಿ ಕಾಶಿಗೆ ತೆರಳಿದನು. ಸ್ವಲ್ಪ ಕಾಲದ ನಂತರ ಅಲ್ಲಿಯೇ ಪ್ರಾಣತ್ಯಾಗ ಮಾಡಿದನು.

### ಭಗವಾನ್ ದಾಸ್ ಬಾಬಾಜಿ

ಹೃದಯವನ್ನು ಕಲಕುವಂತೆ ಹೇಳುತ್ತಿದ್ದ ಭಾಗವತ ಪಠಣ ವನ್ನು ಕೇಳುತ್ತಿದ್ದ ಶ್ರೀರಾಮಕೃಷ್ಣರು, ತಮಗೇ ಅರಿವಿಲ್ಲದಂತೆ ಭಾವದಲ್ಲಿ ಎದ್ದು ನಡೆದು, ಶ್ರೀಚೈತನ್ಯದೇವನಿಗಾಗಿ ಮೀಸಲಾದ ಆಸನದ ಮೇಲೆ ನಿಂತು ಸಮಾಧಿಸ್ಥರಾದರು. ಅವರ್ಣನೀಯ ಆನಂದದಿಂದ ಕೂಡಿದ ಅವರ ಮಂದಹಾಸವು, ಅಲ್ಲಿ ನೆರೆದವ ರೆಲ್ಲರ ಹೃದಯಗಳಲ್ಲಿ ಸಂತಸದ ಬುಗ್ಗೆಯನ್ನೇ ಚಿಮ್ಮಿಸಿತ್ತು. ಸ್ವಲ್ಪ ಕಾಲದ ನಂತರ ತಿಳಿದೆದ್ದ ಜನರಲ್ಲಿ ಗುಸುಗುಸು ಪ್ರಾರಂಭ ವಾಯಿತು. ಇದು ನಡೆದದ್ದು ಕೊಲೂತಾಲಾ ಎಂಬಲ್ಲಿನ ಹರಿಸಭೆಯಲ್ಲಿ, ಶ್ರೀರಾಮಕೃಷ್ಣರ ಈ ವಿಚಿತ್ರ ವರ್ತನೆಯ ಬಗ್ಗೆ ಯಾವ ನಿರ್ಣಯಕ್ಕೂ ಬರಲು ಅಸಮರ್ಥರಾದ ಭಕ್ತರು, ಪರಿಹಾರವನ್ನು ಅರಸುತ್ತಾ, ಕಲ್ನಾ ಎಂಬ ಊರಿನಲ್ಲಿದ್ದ, ತಮ್ಮ ಗುರು ಭಗವಾನ್ ದಾಸ್ ಬಾಬಾಜಿಯ ಬಳಿಗೆ ಬಂದರು. ಬಾಬಾಜಿ ಈ ಕೃತ್ಯವನ್ನು ಮಹಾಪರಾಧವೆಂದು ಪರಿಗಣಿಸಿದು ದಲ್ಲದೆ, ಶ್ರೀರಾಮಕೃಷ್ಣರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಅದಲ್ಲದೆ ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳ ಬೇಕೆಂದು ಭಕ್ತರಿಗೆ ಎಚ್ಚರಿಕೆ ನೀಡಿದರು.

ಇದರ ಅರಿವೇ ಇಲ್ಲದ ಶ್ರೀರಾಮಕೃಷ್ಣರು ಶ್ರೀಚೈತನ್ಯರ ಲೀಲಾಕ್ಷೇತ್ರಗಳಾದ ನವದ್ವೀಪ ಮತ್ತು ಕಲ್ನಾ ಎಂಬ ಸ್ಥಳಗಳಿಗೆ ಕರೆದುಕೊಂಡು ಹೋಗಬೇಕೆಂದು ಮಥುರನನ್ನು ಒತ್ತಾಯಿಸಿದರು. ಕೂಡಲೇ ಎಲ್ಲ ಏರ್ಪಾಡುಗಳು ನಡೆದವು. ಕಲ್ನಾ ತಲುಪಿದ ನಂತರ ಶ್ರೀರಾಮಕೃಷ್ಣರು ತಮ್ಮ ಸೋದರಳಿಯ ಹೃದಯನೊಡನೆ ಬಾಬಾಜಿಯವರ 'ಶ್ರೀನಾಮ ಬ್ರಹ್ಮಾಶ್ರಮ' ವನ್ನು ಅರಸುತ್ತಾ ಹೊರಟರು. ಈ ಆಶ್ರಮದ ಮುಖ್ಯ ಆಕರ್ಷಣೆ ಎಂದರೆ ರಾಧಾ ಗೋವಿಂದ ಹಾಗೂ ಶ್ರೀಚೈತನ್ಯರ ಮಂದಿರ.

ಅದಲ್ಲದೆ ಕಲ್ನಾ, ಬಾಬಾಜಿಯವರು ಬಹಳವಾಗಿ ತಪಸ್ಸು ಮಾಡಿದ ಸ್ಥಳವೂ ಹೌದು. ಬಾಬಾಜಿ ತಮ್ಮ ತ್ಯಾಗ, ತಪಸ್ಸು, ಭಕ್ತಿಗಳಿಂದ ಜನರ ಗೌರವಾದರಗಳಿಗೆ ಪಾತ್ರರಾಗಿದ್ದರು. ಹಾಲು ಬಿಳುಪಿನ ಬಣ್ಣದ ಮೈಕಾಂತಿ, ತಲೆಯ ಮೇಲಿನ ಶಿಖೆ, ಶಾಂತ ಮುಖಭಾವ – ಇವೆಲ್ಲವೂ ಅವರ ವ್ಯಕ್ತಿತ್ವಕ್ಕೊಂದು ದಿವ್ಯವಾದ ಮೆರಗನ್ನು ನೀಡಿತ್ತು. ಬಾಬಾಜಿಯವರು ಕೇವಲ ಶ್ರೇಷ್ಠ ಸಾಧಕ ರಷ್ಟೇ ಅಲ್ಲದೆ ಧಾರ್ಮಿಕ ವಿಷಯಗಳಲ್ಲಿ ತಲೆದೋರುವ ಕಲಹ ಗಳನ್ನು ಇತ್ಯರ್ಥ ಮಾಡುವ ಮುಖಂಡರೂ ಆಗಿದ್ದರು. ಹಾಗೆಯೇ, ವೈಷ್ಣವ ಪಂಥದ ಜನರಿಗೆ ನೀತಿ ನಡವಳಿಕೆಗಳನ್ನು ಹಾಕಿಕೊಟ್ಟ ಗುರುವೂ ಆಗಿದ್ದರು. ಸಂಧಿವಾತ, ಸ್ನಾಯು ಸೆಳೆತಗಳಿಂದ ನಡೆಯಲಾರದ ಸ್ಥಿತಿ ತಲುಪಿದ್ದರೂ, ಹರಿಕೀರ್ತನೆಯ ಸಮಯ ದಲ್ಲಿ ಭಾವ ಉಕ್ಕಿ ಬಂದು, ತಮ್ಮ ಅನಾರೋಗ್ಯವನ್ನೂ ಮರೆತು ಇವರು ನರ್ತಿಸುತ್ತಿದ್ದರು. ಭಾವವನ್ನು ಹೊರಗೆಡವಲು ಇಚ್ಛೆ ಯಿಲ್ಲದಿದ್ದರೂ, ಕೆಲವೊಮ್ಮೆ ಅದು ಅವರ ನಿಗ್ರಹಶಕ್ತಿಯನ್ನು ಮೀರಿ ವ್ಯಕ್ತವಾಗಿಬಿಡುತ್ತಿತ್ತು.

ಭಗವಂತನ ದಾಸ ತಾವೆಂಬ ವಿನೀತ ಭಾವವುಳ್ಳ ಬಾಬಾಜಿ ಸದಾ ಕಾಂತಾ (ಹರಿದ ಹಳೇ ಬಟ್ಟೆಯಿಂದ ಮಾಡಿದ ಮೇಲು ಹೊದಿಕೆ) ಧರಿಸುತ್ತಿದ್ದ ಕಾರಣ, "ಕಾಂತಾ ರಾಮದಾಸ ಬಾಬಾಜಿ" ಎಂದೇ ಪ್ರಸಿದ್ಧರಾಗಿದ್ದರು. ಬಾಬಾಜಿಯವರ ಯೋಗಶಕ್ತಿಗಳ ಬಗ್ಗೆ ಅನೇಕ ಕಥೆಗಳು ಪ್ರಚಲಿತವಾಗಿದ್ದವು. ಒಮ್ಮೆ ಅವರು ಕಲ್ನಾದ ಆಶ್ರಮದಲ್ಲಿ ಜಪ ಮಾಡುತ್ತಾ ಕುಳಿತಿರುವಾಗ ಬೃಂದಾ ವನದ ಗೋವಿಂದ ಮಂದಿರದ ಮುಂದಿನ ತುಳಸಿಗಿಡವನ್ನು, ಕುರಿಯೊಂದು ಮೇಯುತ್ತಿರುವ ದೃಶ್ಯವನ್ನು ಕಂಡು ಜೋರಾಗಿ ಅರಚಿದರು. ಆಗ ತಾನೆ ಅವರ ದರ್ಶನಕ್ಕೆಂದು ಬಂದ ಬರ್ಡವಾನಿನ ಮಹಾರಾಜರು ಈ ಅನಿರೀಕ್ಷಿತ ಕೂಗಿನಿಂದ ದಿಗ್ಭ್ರಾಂತರಾಗಿ ಪೆಚ್ಚು ಮುಖದಿಂದ ಹಿಂತಿರುಗಿದರು. ನಂತರ ಘಟನೆಯ ಸತ್ಯಾಸತ್ಯತೆಯ ಬಗ್ಗೆ ವಿಚಾರಿಸಲಾಗಿ, ಆ ದೃಶ್ಯದಲ್ಲಿ ಕಂಡು ಬಂದದ್ದು ನಿಜವೆಂದು ತಿಳಿಯಿತು. ಈ ಘಟನೆಯಿಂದ ಬಾಬಾಜಿಯವರ ಯೌಗಿಕ ಶಕ್ತಿಯ ಬಗ್ಗೆ ಪ್ರಚಾರವಾಗಿ, ಜನರು ಅವರನ್ನು "ಸಿದ್ಧ" ರೆಂದು ಗೌರವಿಸುತ್ತಿದ್ದರು.

(ಮುಂದುವರಿಯುವುದು)

### ಆಶ್ರಮದ ಕಾರ್ಯಕ್ರಮಗಳು

**ಫೆಬ್ರವರಿ 2009**

| | | |
|---|---|---|
| 6 | ಶುಕ್ರವಾರ | ಏಕಾದಶಿ |
| 9 | ಸೋಮವಾರ | ಸ್ವಾಮಿ ಅದ್ಭುತಾನಂದ ಜಯಂತಿ |
| 20 | ಶುಕ್ರವಾರ | ಏಕಾದಶಿ |
| 23 | ಸೋಮವಾರ | ಶಿವರಾತ್ರಿ |
| 27 | ಶುಕ್ರವಾರ | ಶ್ರೀರಾಮಕೃಷ್ಣ ಜಯಂತಿ |